

# ಬೆವರೇ ನೀರು!

ಬರಗಾಲದಲ್ಲೂ...
ರಾಮ ದೂಮ ಚೋಮ
ನೆಲ ಬಗೆದು
ಬೆವರ ಹನಿಸಿ ಗಿಡ ನೆಟ್ಟರು

ಬಸಿದ ಬೆವರನೆ ಕುಡಿದು
ಗಿಡಗಳು ಬೇರು ಬಿಟ್ಟವು.

ಭರ ಭರ ಬೆಳೆದು
ಬಾನಿಗೆ ಕೈಚಾಚಿ
ಮೋಡಗಳ ಕರೆದವು

ಮಳೆ ಸುರಿದು ಹಳ್ಳಕೊಳ್ಳ
ತುಂಬಿ ಹರಿದುದ್ದಕ್ಕೂ...
ಬಲೆಬೀಸಿ ಸೆಳೆದುಕೊಂಡವು
ಎದ್ದುಬಿದ್ದು ಕಡಲ ಅಲೆಗಳು

ಬೆವರಿನಿಂದಲೆ ಮಳೆ
ಬೆವರಿನಿಂದಲೆ ಹೊಳೆ
ಬೆವರಿನಿಂದಲೆ...
ಕಳೆ–ಬೆಳೆ–ಇಳೆ–ಬಾಳ್ವೆ

ಬೆವರೇ ನೀರು...
ನೂರು ತಲೆಮಾರು!

ನಿನ್ನೊಳಗೂ ನದಿಯಿದೆ
ಒಮ್ಮೆ ಇಳಿದು ನೋಡು!

● ಸವಿತಾ ನಾಗಭೂಷಣ
ಕಲೆ: ಡಿ.ಕೆ. ರಮೇಶ್